


بسم اللهِ الرّحمٰن الرّحيم

# ಮಸ್ಜಿದ್ ಫಝ್ಲ್ ಶತಮಾನೋತ್ಸವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–10–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ اِيَّاكَ نَعْبُدُ وَاِيَّاكَ نَسْتَعِيْنُ ـ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ನಾಳೆ ಮಸ್ಜಿದ್ ಫಝ್ಲ್‌ಗೆ ನೂರು ವರ್ಷ ಪೂರ್ತಿಯಾಗುವ ಸಂದರ್ಭದಲ್ಲಿ ಯು.ಕೆ. ಜಮಾಅತ್ ಒಂದು ಕಾರ್ಯಕ್ರಮ ನಡೆಸುತ್ತಿದೆ. ಅದರಲ್ಲಿ ಅಹ್ಮದಿಯಯೇತರ ಅತಿಥಿಗಳು, ನೆರೆಕರೆಯವರು ಮುಂತಾದವರನ್ನು ಆಮಂತ್ರಿಸಲಾಗಿದೆ. ಕ್ರೈಸ್ತರ ನಿವಾಸದಲ್ಲಿ ನಿರ್ಮಿಸಲಾದ ಅಹ್ಮದಿಯಾ ಜಮಾಅತಿನ ಮೊದಲ ಮಸೀದಿಯಾಗಿದೆ ಎಂಬ ನಿಟ್ಟಿನಲ್ಲಿ ಮಸ್ಜಿದ್ ಫಝ್ಲಿಗೆ ಒಂದು ಚಾರಿತ್ರಿಕ ಪ್ರಾಧಾನ್ಯವಿದೆ. ಅನಂತರ ಇಲ್ಲಿಂದ ಇಸ್ಲಾಮಿನ ನೈಜ ಅಧ್ಯಾಪನೆ ಮತ್ತು ಪ್ರಚಾರ ಜನರಿಗೆ ವಿಸ್ತಾರವಾಗಿ ವ್ಯಾಪಿಸಲು ಆರಂಭಿಸಿತು.

ಅಹ್ಮದಿಯಾ ಜಮಾಅತ್ ಆಂಗ್ಲೇಯರು ಸ್ವತಃ ನೆಟ್ಟ ಗಿಡವೆಂದು ಇಂದು ನಮ್ಮ ಎದುರಾಳಿಗಳು ಹೇಳುತ್ತಾರೆ. ಆದರೆ ಅದ್ಭುತವೇನೆಂದರೆ, ಈ ಪಾಶ್ಚಿಮಾತ್ಯ ದೇಶಗಳಲ್ಲಿ ಇರುವ ಜನರ ದೌರ್ಬಲ್ಯಗಳನ್ನು ಅವರದೇ ದೇಶಗಳಲ್ಲಿ ಬಯಲುಮಾಡಿ ಇಸ್ಲಾಮಿನ ಸೌಂದರ್ಯದ ಪ್ರಚಾರ ಈ ಗಿಡದ ಮೂಲಕ ಜಾರಿಯಲ್ಲಿದೆ.

ಮಸ್ಜಿದ್ ಫಝ್ಲ್‌ನ ನಿರ್ಮಾಣಕ್ಕೆ ಮುಂಚೆ ವೋಕಿಂಗ್‌ನಲ್ಲಿ ಒಂದು ಮಸೀದಿಯನ್ನು ನಿರ್ಮಿಸಲಾಗಿತ್ತು. ಅದನ್ನು ಪ್ರಸಿದ್ಧ ಪೌರಸ್ತ್ಯ ಜಿ. ಡಬ್ಲ್ಯೂ ಲ್ಯಾಟ್ನರ್ ನಿರ್ಮಿಸಿದ್ದರು. ಅವರು ಲಾಹೋರಿನ ಒರಿಯಂಟಲ್ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾಗಿ ಇಂಗ್ಲೆಂಡಿಗೆ ಮರಳಿ ಹೋಗಿ ಕ್ರಿ.ಶ. 1889ರಲ್ಲಿ ಆ ಮಸೀದಿಯನ್ನು ನಿರ್ಮಿಸಿದ್ದರು. ವಿಸ್ಮಯಕರವಾದ ಸಂಗತಿಯೇನೆಂದರೆ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪನೆಗೊಂಡ ವರ್ಷವೂ ಕ್ರಿ.ಶ. 1889 ಆಗಿತ್ತು. ಅದೇ ವರ್ಷ ಪ್ರೊಫೆಸರ್ ಸಾಹೆಬ್ ನಿಧನಗೊಂಡರು. ಹೀಗೆ ಆ ಮಸೀದಿ ಕೂಡ ಮುಚ್ಚಲ್ಪಟ್ಟಿತು. ಆ ಮಸೀದಿಯನ್ನು ನಿಭಾಯಿಸಲು ಯಾರೂ ಇಲ್ಲವಾಯಿತು. ಅನಂತರ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ]ರ ಕಾಲದಲ್ಲಿ ಖ್ವಾಜಾ ಕಮಾಲುದ್ದೀನ್ ಸಾಹಿಬ್‌ರು ಅಲ್ಲಿಗೆ ಹೋಗಿ ಅದನ್ನು ತೆರೆಸಲು ಪ್ರಯತ್ನಿಸಿದರು ಮತ್ತು ಯಶಸ್ಸು ಗಳಿಸಿದರು. ಅವರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ]ರಿಗೆ ಹೀಗೆ ಪತ್ರ ಬರೆದರು: ಈಗ ಈ ಮಸೀದಿಗೆ ಒಂದು ಟ್ರಸ್ಟ್ ಮಾಡಲಾಗಿದೆ. ನನ್ನನ್ನು ಅದರ ಮೇಲ್ನೋಟಗಾರನಾಗಿ ಮಾಡಲಾಗಿದೆ. ಹಾಗೆ ಅದರಲ್ಲಿ ಪುನಃ ಆರಾಧನೆ ಆರಂಭವಾಯಿತು. ಆ ಮಸೀದಿಯನ್ನು ತೆರೆಯಲಾದಾಗ ಖ್ವಾಜಾ ಸಾಹಿಬ್‌ರ ಜೊತೆಗೆ ಹಝ್ರತ್ ಚೌಧರಿ ಮುಹಮ್ಮದ್ ಝಫರುಲ್ಲಾಹ್ ಖಾನ್ ಸಾಹಿಬ್[ರ] ಸಹ ಅಲ್ಲಿಗೆ ಹೋಗಿ ನಫ್ಲ್‌ಗಳನ್ನು ಅನುಷ್ಠಿಸಿ ತುಂಬಾ ದುಆ ಮಾಡಿದರು.

ಆಮೇಲೆ ಸ್ವಲ್ಪ ಕಾಲಾವಧಿಯ ನಂತರ ಹಝ್ರತ್ ಮುಸ್ಲಿಹ್ ಮೌಊದ್[ರ] ಮುಬಲ್ಲಿಗ್‌ರ ಆವಶ್ಯಕತೆ ಇರುವುದಾಗಿ ಮನವಿ ಮಾಡಿದರು. ಹಣದ ಕೊರತೆಯಿದ್ದೂ ಚೌಧರಿ ಫತಹ್ ಮುಹಮ್ಮದ್ ಸಿಯಾಲ್ ಸಾಹಿಬ್[ರ]ರನ್ನು ಅಲ್ಲಿಗೆ ಕಳುಹಿಸಲಾಯಿತು. ಅವರು ಖ್ವಾಜ ಸಾಹಿಬ್‌ರ ಜೊತೆಗೆ ಅಲ್ಲಿ ಸೇವೆ ಸಲ್ಲಿಸಿದರು. ಅನಂತರ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ]ರ ನಿಧನದ ನಂತರ ಖ್ವಾಜ ಸಾಹಿಬ್‌ರು ಎರಡನೇ ಖಲೀಫರಿಗೆ ಬೈಅತ್ ಮಾಡಲಿಲ್ಲ. ಆದ್ದರಿಂದ ಚೌಧರಿ ಫತಹ್ ಮುಹಮ್ಮದ್ ಸಿಯಾಲ್ ಸಾಹಿಬ್[ರ] ಅವರನ್ನು ಬಿಟ್ಟು ಮತ್ತೊಂದೆಡೆಗೆ ಹೊರಟು ಹೋದರು. ಇದು ವೋಕಿಂಗ್‌ನ ಮಸೀದಿಯಾಗಿದೆ.

ಮುಸ್ಲಿಮ್ ಪಂಗಡ ಅಥವಾ ಜಮಾಅತಿನ ಕಡೆಯಿಂದ ನಿರ್ಮಿಸಲಾದ ಮಸೀದಿ ಮಸ್ಜಿದ್ ಫಝ್ಲ್ ಆಗಿತ್ತು. ನಿಸ್ಸಂಶಯವಾಗಿಯೂ ಇಂದು ಇಂಗ್ಲೆಂಡ್‌ನಲ್ಲಿ, ಲಂಡನಿನಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಕೂಡ ಮುಸ್ಲಿಮರ ಅನೇಕ ಮಸೀದಿಗಳು ಇವೆ. ಆದರೆ ಲಂಡನಿನಲ್ಲಿ ಮುಸ್ಲಿಮರ ಮೊದಲ ಮಸೀದಿ ಎಂಬ ಗೌರವ ಮಸ್ಜಿದ್ ಫಝ್ಲ್‌ಗೆ ಮಾತ್ರವಿದೆ.

ಅಹ್ಮದಿಯಾ ಜಮಾಅತಿನ ವೈಶಿಷ್ಟ್ಯವೇನೆಂದರೆ, ಅದರ ಮಸೀದಿಗಳು ಜಮಾಅತಿನ ಜನರ ದೇಣಿಗೆಗಳಿಂದ ಮತ್ತು ತ್ಯಾಗಗಳಿಂದ ನಿರ್ಮಿಸಲಾಗುತ್ತವೆ. ಈಗ ಇಂಗ್ಲೆಂಡ್‌ನಲ್ಲಿ ಜಮಾಅತಿನ ಹತ್ತಾರು ಮಸೀದಿಗಳು ನಿರ್ಮಾಣಗೊಂಡಿವೆ. ಹೇಗಿದ್ದರೂ ನಾನಿಂದು ಮಸ್ಜಿದ್ ಫಝ್ಲ್‌ಗೆ ಸಂಬಂಧಿಸಿ ಸ್ವಲ್ಪ ಹೇಳಲು ಬಯಸುತ್ತೇನೆ.

ಇಸ್ಲಾಂ ಧರ್ಮ ಪಾಶ್ಚಿಮಾತ್ಯ ದೇಶಗಳಲ್ಲಿ ಹರಡುವುದರ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್[ಅ] ಸಾಕಷ್ಟು ಹೇಳಿರುವರು. ಇದೇ ನಮ್ಮ ತಬ್ಲೀಗಿನ ಕಾರ್ಯಕ್ರಮಗಳ ಬುನಾದಿಯಾಗಿದೆ. ಒಂದೆಡೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಪಶ್ಚಿಮದಿಂದ ಸೂರ್ಯನು ಉದಿಸುವುದು ಎಂಬ ಪ್ರವಾದಿವಚನದ ಅರ್ಥ, ದೀರ್ಘ ಕಾಲದಿಂದಲೂ ಅಂಧಕಾರ, ಸತ್ಯನಿಷೇಧ ಮತ್ತು ದುರ್ಮಾರ್ಗದಲ್ಲಿ ಇರುವ ಪಾಶ್ಚಿಮಾತ್ಯ ದೇಶಗಳಲ್ಲಿ ಸತ್ಯದ ಸೂರ್ಯನು ಪ್ರಕಾಶಿಸಲ್ಪಡುವುದು ಎಂದಾಗಿದೆ.

ತನ್ನ ಒಂದು ಕನಸನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಲಂಡನ್ ಪಟ್ಟಣದಲ್ಲಿ ಒಂದು

ಪ್ರವಚನ ಪೀಠದಲ್ಲಿ ನಿಂತುಕೊಂಡು ನಾನು ಆಂಗ್ಲ ಭಾಷೆಯಲ್ಲಿ ಅತ್ಯಂತ ಸಮರ್ಥನೀಯವಾದ ರೀತಿಯಲ್ಲಿ ಇಸ್ಲಾಮಿನ ಸತ್ಯತೆಯನ್ನು ಪ್ರಕಟಗೊಳಿಸುತ್ತಿರುವುದಾಗಿ ನಾನು ಕನಸಿನಲ್ಲಿ ಕಂಡೆನು. ಅನಂತರ ನಾನು ಚಿಕ್ಕ ಚಿಕ್ಕ ಮರಗಳಲ್ಲಿ ಕುಳಿತುಕೊಂಡಿದ್ದ ಅನೇಕ ಬಿಳಿ ಪಕ್ಷಿಗಳನ್ನು ಹಿಡಿಯುತ್ತಿರುವುದಾಗಿ ಕಂಡೆನು. ಅದನ್ನು ನಾನು ಹೀಗೆ ವ್ಯಾಖ್ಯಾನಿಸಿದೆ: ನನಗೆ ಅಲ್ಲಿಗೆ ಹೋಗಲು ಸಾಧ್ಯವಾಗದೇ ಬಂದರೂ ನನ್ನ ಲಿಖಿತಗಳು ಅಲ್ಲಿ ಹರಡುವುವು ಮತ್ತು ಅನೇಕ ಸನ್ಮಾರ್ಗಿಗಳಾದ ಆಂಗ್ಲೇಯರು ಸತ್ಯದ ಕಡೆಗೆ ಆಕರ್ಷಿತರಾಗುವರು.

ಇಂಗ್ಲೆಂಡಿನ ಮೊದಲ ಅಧಿಕೃತ ಮುಬಲ್ಲಿಗ್ ಚೌಧರಿ ಫತಹ್ ಮುಹಮ್ಮದ್ ಸಿಯಾಲ್ ಸಾಹಿಬ್[ರ] ಆಗಿದ್ದರು. ಅವರಿಗೆ ಅಲ್ಲಾಹನು ಇಲ್ಲಿ ಮೊದಲ ಫಲವನ್ನು ಸಹ ದಯಪಾಲಿಸಿದನು. ಒಬ್ಬ ಪತ್ರಕರ್ತರಾಗಿದ್ದ ಮಿಸ್ಟರ್ ಕೋರಿಯೋ ಇಲ್ಲಿಯ ಮೊದಲ ಅಹ್ಮದಿಯಾಗಿದ್ದರು. ಅವರ ನಂತರ ಹತ್ತಾರು ಜನರು ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದರು. ಅನಂತರ ಹಝ್ರತ್ ಮುಸ್ಲಿಹ್ ಮೌಊದ್[ರ] ಸಿಯಾಲ್ ಸಾಹಿಬ್[ರ]ರನ್ನು ಮರಳಿ ಕರೆದು ಖಾಝಿ ಅಬ್ದುಲ್ಲಾಹ್ ಸಾಹಿಬ್[ರ]ರನ್ನು ಮುಬಲ್ಲಿಗ್ ಆಗಿ ಕಳುಹಿಸಿದರು. ಅವರು ಸಹ ಸಹಾಬಿಯಾಗಿದ್ದರು. ಅವರು ಪ್ರಥಮ ಮಹಾಯುದ್ಧದ ಸಮಯದಲ್ಲಿ ಇಲ್ಲಿ ಸೇವೆ ಸಲ್ಲಿಸಿದರು. ಅವರ ಕಾಲದಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆಯಲಾಗಿತ್ತು. 1917ರಿಂದ 1920ರ ಜನವರಿ ತನಕ ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್[ರ] ಸಹ ಇಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಿದರು. 1919ರಲ್ಲಿ ಚೌಧರಿ ಫತಹ್ ಮುಹಮ್ಮದ್ ಸಿಯಾಲ್ ಸಾಹಿಬ್[ರ]ರನ್ನು ಪುನಃ ಮತ್ತು ಅಬ್ದುರ್ರಹೀಮ್ ನಯ್ಯರ್ ಸಾಹಿಬ್[ರ]ರನ್ನು ಸಹ ಮುಬಲ್ಲಿಗ್ ಆಗಿ ಇಲ್ಲಿಗೆ ಕಳುಹಿಸಲಾಯಿತು. ಅವರು ನಿಸ್ವಾರ್ಥರಾಗಿ ಸೇವೆ ಮಾಡಿದರು. ಕ್ರಿ.ಶ. 1920ರಲ್ಲಿ ಮಸೀದಿ ನಿರ್ಮಿಸಲಿಕ್ಕಾಗಿ ಒಂದು ಸ್ಥಳ ಖರೀದಿ ಮಾಡಲು ಫತಹ್ ಮುಹಮ್ಮದ್ ಸಿಯಾಲ್ ಸಾಹಿಬ್[ರ]ರಿಗೆ ಹಝ್ರತ್ ಮುಸ್ಲಿಹ್ ಮೌಊದ್[ರ] ನಿರ್ದೇಶನ ಕೊಟ್ಟರು. ಹೀಗೆ ಎರಡು ಸಾವಿರದ ಇನ್ನೂರು ಪೌಂಡ್‌ಗಿಂತ ಹೆಚ್ಚಿನ ಹಣದಿಂದ ಪಟ್ನಿಯ ಪ್ರದೇಶದಲ್ಲಿ ಸ್ಥಳ ಖರೀದಿ ಮಾಡಲಾಯಿತು.

ಹಝ್ರತ್ ಮುಸ್ಲಿಹ್ ಮೌಊದ್[ರ]ರಿಗೆ ಅದರ ಸುದ್ದಿ ಲಭಿಸಿದಾಗ ಅವರು ಡಲ್‌ಹೌಸಿಯಲ್ಲಿ ಇದ್ದರು. ಅವರು ಅಲ್ಲಿ ಒಂದು ದೊಡ್ಡ ಕಾರ್ಯಕ್ರಮವನ್ನು ಏರ್ಪಡಿಸಿ ಮಸೀದಿಯ ಹೆಸರು **ಮಸ್ಜಿದ್ ಫಝ್ಲ್** ಎಂದು ನಾಮಕರಣ ಮಾಡಿದರು. ಅನಂತರ ಆ ಮಸೀದಿಯ ನಿರ್ಮಾಣಕ್ಕಾಗಿ ಚಂದಾ ನೀಡಲು ಮನವಿ ಮಾಡಲಾಯಿತು. ಕ್ರಿ.ಶ. 1924ರಲ್ಲಿ ವೆಂಬ್ಲಿಯ ಸರ್ವಧರ್ಮ ಸಮ್ಮೇಳನದಲ್ಲಿ ಅಬ್ದುರ್ರಹೀಂ ನಯ್ಯರ್ ಸಾಹಿಬ್[ರ]ರನ್ನು ಇಸ್ಲಾಮಿನ ಬೋಧನೆಯನ್ನು ವಿವರಿಸಲು ಆಮಂತ್ರಿಸಲಾದಾಗ ಅವರು ಅದರ ಬಗ್ಗೆ ಖಾದಿಯಾನಿಗೆ ಮಾಹಿತಿ ಮುಟ್ಟಿಸಿದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಆಮಂತ್ರಣವನ್ನು ಸ್ವೀಕರಿಸುತ್ತಾ ಇಸ್ಲಾಮಿನ ವೈಶಿಷ್ಟ್ಯಗಳನ್ನು ವಿವರಿಸಲು **"ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮ್"** ಎಂಬ ಹೆಸರಿನಲ್ಲಿ ಒಂದು ಪುಸ್ತಕವನ್ನು ಬರೆದರು.

ಹಝ್ರತ್ ಮುಸ್ಲಿಹ್ ಮೌಊದ್[ರ] ಸ್ವತಃ ಆ ಸಮ್ಮೇಳನದಲ್ಲಿ ಪಾಲ್ಗೊಳ್ಳಬೇಕು ಎಂದು ತೀರ್ಮಾನಿಸಲಾಯಿತು. ಹೀಗೆ ಹಝ್ರತ್ ಮುಸ್ಲಿಹ್ ಮೌಊದ್[ರ] ಡಮಸ್ಕಸ್, ಈಜಿಪ್ಟ್, ಇಟಲಿ, ಸ್ವಿಝರ್‌ಲ್ಯಾಂಡ್ ಮತ್ತು ಫ್ರಾನ್ಸ್ ಮಾರ್ಗವಾಗಿ ಕ್ರಿ.ಶ. 1924, ಆಗಸ್ಟ್ 22ರಂದು ಇಂಗ್ಲೆಂಡ್ ತಲುಪಿದರು. ಅಲ್ಲಿ ಸೆಂಟ್ ಪಾಲ್ ಚರ್ಚಿನ ಮುಂದೆ ನಿಂತುಕೊಂಡು ಅವರು ಇಸ್ಲಾಮಿನ ವಿಜಯಕ್ಕಾಗಿ ಅಲ್ಲಾಹನಲ್ಲಿ ದುಆ ಮಾಡಿಕೊಂಡು ಪಟ್ಟಣವನ್ನು ಪ್ರವೇಶಿಸಿದರು. ಅವರ ತಂಗುವಿಕೆಯಿಂದ ಅಲ್ಲಿನ ವಾರ್ತಾ ಮಾಧ್ಯಮಗಳಲ್ಲಿ ವಿವಿಧ ಕಾರಣಗಳ ಆಧಾರದಲ್ಲಿ ಬಹಳ ಹೆಚ್ಚು ಪ್ರಚಾರ ಕೂಡ ಲಭಿಸಿತು.

ಮಸೀದಿಯ ನಿರ್ಮಾಣಕ್ಕೆ ಸಂಬಂಧಪಟ್ಟು ಮೊಟ್ಟ ಮೊದಲ ಹಂತ ಹಣದ ಆವಶ್ಯಕತೆಯಾಗಿತ್ತು. ಅದು ಹೇಗೆ ನಡೆಯಿತು ಎಂದರೆ, ಯುದ್ಧ ಕೊನೆಗೊಂಡ ನಂತರ ಒಂದು ಘಟ್ಟದಲ್ಲಿ ಪೌಂಡಿನ ಮೌಲ್ಯ ಕಡಿಮೆಯಾಗಲು ಆರಂಭಗೊಂಡಿತು. ಆ ಸಂದರ್ಭದಲ್ಲಿ 1920ರಲ್ಲಿ ಹುಝೂರಿನ ನಿರ್ದೇಶನ ಪ್ರಕಾರ ಮೊದಲು ಮೂವತ್ತು ಸಾವಿರ, ಅನಂತರ ಒಂದು ಲಕ್ಷ ರೂಪಾಯಿ ಸಂಗ್ರಹಿಸಲು ಮನವಿ ಮಾಡಲಾಯಿತು. ಅಹ್ಮದಿಯಾ ಜಮಾಅತಿನ ಬಾಂಧವರು ಈ ಮನವಿಗೆ ಓಗೊಟ್ಟು ಬ್ಯಾಂಕ್ ಆಫ್ ಇಂಡಿಯಾದ ಮೂಲಕ ಈ ಹಣವನ್ನು ಇಂಗ್ಲಂಡಿಗೆ ಕಳುಹಿಸಿದರು. ಈ ಮೊಬಲಗನ್ನು ಮೂರು ಸಾವಿರದ ನಾನ್ನೂರ ಆರುವತ್ತೈದು ಪೌಂಡ್ ಆಗಿ ಪರಿವರ್ತಿಸಲಾಯಿತು. ಕ್ರಿ.ಶ. 1924, ಅಕ್ಟೋಬರ್ 19, ರವಿವಾರದಂದು ಈ ಮಸೀದಿಗೆ ತಳಪಾಯ ಹಾಕಲಾಯಿತು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪಾರ್ಲಿಮೆಂಟಿನ ಸದಸ್ಯರು, ನೇತಾರರು, ರಾಜಕರಣಿಗಳು, ರಾಯಭಾರಿಗಳು ಸಮೇತ ಅನೇಕ ಜನರಿಗೆ ಆಮಂತ್ರಣ ಪತ್ರವನ್ನು ಕಳುಹಿಸಲಾಗಿತ್ತು. ಕಡಿಮೆ ಜನರು ಬರುವರು ಎಂದು ಭಾವಿಸಲಾಗಿತ್ತು. ಆದರೆ ಬಹಳ ದೊಡ್ಡ ಸಂಖ್ಯೆಯಲ್ಲಿ ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅನೇಕ ದೇಶಗಳ ಪ್ರತಿನಿಧಿಗಳು ಸಹ ಈ ಸಮಾರಂಭದಲ್ಲಿ ಭಾಗವಹಿಸಿದರು. ಈ ಸಮಾರಂಭ ಅತ್ಯಂತ ವಿಜಯಕರವಾಯಿತು. ಅಡಿಗಲ್ಲು ಹಾಕುವ ಕಾರ್ಯಕ್ರಮದ ಆರಂಭದಲ್ಲಿ ಹಾಫಿಝ್ ರೋಶನ್ ಅಲಿ ಸಾಹಿಬ್[ರ] ಪವಿತ್ರ ಖುರ್‌ಆನ್ ಪಾರಾಯಣ ಮಾಡಿದರು. ಅನಂತರ ಹಝ್ರತ್ ಮುಸ್ಲಿಹ್ ಮೌಊದ್[ರ] ಭಾಷಣ ಮಾಡಿದರು.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೀಗೆ ಹೇಳಿದರು: ಪವಿತ್ರ ಖುರ್‌ಆನಿನ ಆದೇಶ ಮತ್ತು ಹಝ್ರತ್ ಪೈಗಂಬರ್[ಸ]ರ ಚರ್ಯೆಯಿಂದ ಗೊತ್ತಾಗುವುದೇನೆಂದರೆ, ಇಸ್ಲಾಮಿನ ಮಸೀದಿಗಳ ಬಾಗಿಲು ಅಲ್ಲಾಹನ ಆರಾಧನೆ ಮಾಡಲು ಬಯಸುವ ಪ್ರತಿಯೊಬ್ಬರಿಗೂ ತೆರೆದಿಡಲಾಗುತ್ತದೆ. ಇಸ್ಲಾಮಿನ ಮಸೀದಿ ವಿವಿಧ ಧರ್ಮಗಳ ವ್ಯಕ್ತಿಗಳನ್ನು ಒಗ್ಗಟ್ಟಾಗಿಸುವ ಕೇಂದ್ರಬಿಂದುವಾಗಿದೆ. ಇದೇ ಭಾವನೆಯೊಂದಿಗೆ ಅಹ್ಮದಿಯಾ ಜಮಾಅತ್ ಈ ಮಸೀದಿಯನ್ನು ನಿರ್ಮಾಣ ಮಾಡಲು ನಿರ್ಧರಿಸಿದೆ. ಈ ಮಸೀದಿಯ ಅಡಿಗಲ್ಲು ಹಾಕುವುದಕ್ಕೆ

ಮುಂಚಿತವಾಗಿ ಮಸೀದಿಯನ್ನು ಅಲ್ಲಾಹನ ಆರಾಧನೆಗೆ ಮಾತ್ರವೇ ನಿರ್ಮಿಸಲಾಗುತ್ತದೆ ಎಂಬುದನ್ನು ನಾನು ಘೋಷಿಸುತ್ತೇನೆ.

ಅಡಿಪಾಯ ಹಾಕಿದ ಎರಡು ವರ್ಷದ ನಂತರ ಮಸೀದಿಯ ಉದ್ಘಾಟನೆಯಾಯಿತು. ಉದ್ಘಾಟನೆ ನಡೆಸಲು ಫೈಸಲ್ ರಾಜಕುಮಾರ ಬರಬೇಕಾಗಿತ್ತು. ಅವರೊಡನೆ ಹೋಗಲು ಅವರ ತಂದೆ ಹೇಳಿದ್ದರು. ಆದರೆ ಮುಸ್ಲಿಮರ ವಿರೋಧದ ಕಾರಣದಿಂದ ಅರಸ ಅವರನ್ನು ಹೋಗುವುದರಿಂದ ತಡೆದರು. ಆದ್ದರಿಂದ ಶೇಖ್ ಅಬ್ದುಲ್‌ಖಾದಿರ್ ಸಾಹಿಬ್ ಅದರ ಉದ್ಘಾಟನೆ ನೆರವೇರಿಸಿದರು. ಅವರು ಸ್ಪಷ್ಟವಾಗಿ ಹೀಗೆ ಹೇಳಿದರು: ನಾನು ಅಹ್ಮದಿಯಲ್ಲ. ಆದರೆ ನಾವು ಇಸ್ಲಾಮಿನ ಸೇವೆ ಮಾಡಲು ಬಯಸುತ್ತಿದ್ದೇವೆ. ಆದ್ದರಿಂದ ನಾವು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪರಸ್ಪರ ಸಹಾಯ ಮಾಡಬೇಕು. ಅದು ಶೇಖ್ ಅಬ್ದುಲ್ ಖಾದಿರ್ ಸಾಹಿಬ್‌ರ ಧೈರ್ಯ ಮತ್ತು ವಿಶಾಲ ಹೃದಯವಾಗಿತ್ತು. ಅಲ್ಲಾಹನು ಅದಕ್ಕೂ ಅವರಿಗೆ ಪ್ರತಿಫಲ ನೀಡಲಿ.

ನಾನು ಹೇಳಿದ್ದು ಮಸ್ಜಿದ್ ಫಝ್‌ಲಿನ ಸಂಕ್ಷಿಪ್ತ ಚರಿತ್ರೆಯಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಇಸ್ಲಾಮಿನ ಪ್ರಚಾರವಾಗಲಿ ಎಂಬುದಾಗಿತ್ತು ಈ ಮಸೀದಿ ನಿರ್ಮಾಣದ ಉದ್ದೇಶ. ಇಂದು ನಾವು ಅದರ ನೂರು ವರ್ಷದ ಪೂರ್ತೀಕರಣದ ಸಮಾರಂಭ ನಡೆಸುತ್ತಿದ್ದೇವೆ. ಆದರೆ ಇದು ಯಾವುದೇ ಲೌಕಿಕ ಸಮಾವೇಶವಲ್ಲ. ಈ ಮಸೀದಿ ಅಲ್ಲಾಹನ ಆರಾಧನೆಗಾಗಿ ಜನರು ಬಂದು ಸೇರಲಿಕ್ಕಾಗಿ, ಅಲ್ಲಾಹನ ಆರಾಧನೆ ಮಾಡಲಿಕ್ಕಾಗಿ, ಅನ್ಯೋನ್ಯ ಕರ್ತವ್ಯಗಳನ್ನು ಈಡೇರಿಸಲಿಕ್ಕಾಗಿ, ನಮ್ಮ ಆಧ್ಯಾತ್ಮಿಕ ಸುಧಾರಣೆ ಮಾಡಲಿಕ್ಕಾಗಿ, ತಮ್ಮ ನೈತಿಕ ಗುಣಗಳನ್ನು ಉನ್ನತಗೊಳಿಸಲಿಕ್ಕಾಗಿ ಇರುವ ಜಾಗವಾಗಿದೆ.

ಇಂದು ನಾವು ಅಲ್ಲಾಹನ ಆರಾಧನೆಯ ಹಕ್ಕನ್ನು ಈಡೇರಿಸುವವರಾಗಲು, ಅಲ್ಲಾಹನ ಆದೇಶಗಳನ್ನು ಪಾಲಿಸುವವರಾಗಲು ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವವರಾಗಲು ಪ್ರಯತ್ನಿಸಬೇಕು. ಹಾಗಾದರೆ ಮಾತ್ರ ನಾವು ಈ ಲೋಕವನ್ನು ಶಾಂತಿ ಮತ್ತು ಸಮಾಧಾನದ ತೊಟ್ಟಿಲನ್ನಾಗಿ ಮಾಡುವವರಾಗುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***[atba]

At, ***'Masjid Mubarak',*** *Islamabad, Tilford,* U.K. On 18-10-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon